ಕನ್ನಡಪ್ರಭ
ಬುಧವಾರ 30.11.2022

ಮನುಷ್ಯರ ಪ್ರಾಣ ಉಳಿಸುವ ಅಂಗದಾನ ಶ್ರೇಷ್ಠದಾನ

• ಕನ್ನಡಪ್ರಭ ವಾರ್ತೆ ನಾಗಮಂಗಲ

ದಾನಗಳಲ್ಲಿ ಬಲು ಶ್ರೇಷ್ಠವಾದುದ್ದು ಅಂಗ ದಾನ. ಇದರಿಂದ ಅದೆಷ್ಟೋ ಮಂದಿಯ ಪ್ರಾಣ ಉಳಿಸುವ ಮೂಲಕ ಇನ್ನೊಬ್ಬರ ಬಾಳಿಗೆ ಬೆಳಕಾಗಬಹುದು ಎಂದು ಆದಿಚುಂಚನಗಿರಿ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಎಂ.ಜಿ.ಶಿವರಾಂ ಹೇಳಿದರು.

ತಾಲೂಕಿನ ಬಿ.ಜಿ.ನಗರದ ಆದಿಚುಂಚನಗಿರಿ ವೈದ್ಯಕೀಯ ಮಹಾವಿದ್ಯಾಲಯದ ನ್ಯಾಯ ವೈದ್ಯಶಾಸ್ತ್ರ ವಿಭಾಗ, ವಿದ್ಯಾರ್ಥಿ ಬೆಂಬಲಿತ ಕೋಶ ಹಾಗೂ ಮೋಹನ್ ಫೌಂಡೇಶನ್ ಆಶ್ರಯದಲ್ಲಿ ಮಂಗಳವಾರ ನಡೆದ ಅಂಗಗಳ ದಾನ ಮತ್ತು ಅಂಗಗಳ ಕಸಿ ವಿಷಯಕ್ಕೆ ಸಂಬಂಧಿಸಿದಂತೆ ಕಾರ್ಯಾಗಾರ ಮತ್ತು ಉಪನ್ಯಾಸ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಮನುಷ್ಯ ತಾನು ಸತ್ತಮೇಲೆ ಅಂಗಗಳನ್ನು ದಾನ ಮಾಡುವುದರಿಂದ ಸಮಾಜದಲ್ಲಿ ಅಂಗಾಂಗಳ ಅಗತ್ಯವಿರುವವರಿಗೆ ಅನುಕೂಲವಾಗುತ್ತದೆ. ಇದರ ಬಗ್ಗೆ ಆರೋಗ್ಯ ಕಾರ್ಯಕರ್ತರು ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು ಬಹಳ ಅಗತ್ಯವಾಗಿದೆ ಎಂದರು.

ಅಂಗಾಂಗ ಕಸಿ ತಜ್ಞ ಡಾ.ಸುನಿಲ್ ಸೆನ್ವಿ ಮಾತನಾಡಿ, ಅಂಗಾಂಗ ಕಸಿ ಮಾಡುವುದು ಸುಲಭವಲ್ಲ. ಇದು ಒಂದು ಸವಾಲು. ವ್ಯಕ್ತಿ ಮೃತಪಟ್ಟ ಮೇಲೆ ಗರ್ಭಕೋಶ ಲಿವರ್ , ಪಿತ್ತಕೋಶ, ಮೂತ್ರಕೋಶ, ಹಾಗೂ ಕಣ್ಣುಗಳನ್ನು ದಾನ ಮಾಡಿದರೆ ಈ ಅಂಗಾಂಗ ಬೇರೆಯವರಿಗೆ ಜೋಡಿಸಿ ಅವರ ಆರೋಗ್ಯ ಉತ್ತಮ ಪಡಿಸಬಹುದು ಎಂದರು.

ಡಾ. ರಜನಿ ಮಾತನಾಡಿ, ಮೋಹನ್ ಫೌಂಡೇಶನ್ ಅಂಗಾಂಗ ಕಸಿ ಅಗತ್ಯ ಇರುವವರಿಗೆ ದಾನಿಗಳ ಪರಿಚಯ ಮಾಡಲಾಗುವುದು ಎಂದರು. ಡಾ.ಚಿನ್ಮಯ, ನ್ಯಾಯ ವೈದ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ಕುಮಾರ್, ಡಾ.ವಿಜಯಕುಮಾರ್, ಡಾ.ಉತ್ತಮ್, ನಾರಾಯಣ ಗೌಡ ಉಪಸ್ಥಿತರಿದ್ದರು. ಸುಮಾರು 400ಕ್ಕೂ ಹೆಚ್ಚು ವೈದ್ಯಕೀಯ, ನರ್ಸಿಂಗ್ ವಿದ್ಯಾರ್ಥಿಗಳು, ಬೋಧಕ ಸಿಬ್ಬಂದಿ ಹಾಜರಿದ್ದರು.

Scanned with OKEN Scanner